ಬೇಗೂರು ಹೋಬಳಿಯಲ್ಲಿದ್ದ ಕೊಳಚೆ ಪ್ರದೇಶದ ನಿವಾಸಿಗಳು ಈ ಜಾಗವನ್ನು ಖಾಲಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಖಾಲಿಯಾಗಿರತಕ್ಕ ಜಾಗದಲ್ಲಿ ಈ ಕೊಳಚೆ ಪ್ರದೇಶಗಳಿಗೆ ಸಂಬಂಧ ಪಡದವರು ಅಕ್ರಮವಾಗಿ ಸೇರಿಕೊಂಡಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ, ಅಕ್ರಮವಾಗಿ ಸೇರಿಕೊಂಡವರನ್ನು ಖಾಲಿ ಮಾಡಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ಜಯನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹೊಂಬೇಗೌಡ ಕೊಳಚೆ ಪ್ರದೇಶಕ್ಕಾಗಿ ಈ ಕೆಳಕಂಡ ಸರ್ವೆ ನಂ.ಗಳಲ್ಲಿ ಒಟ್ಟು 0-34 ಗುಂಟೆ ಜಮೀನನ್ನು ನೋಟಿಫೈ ಮಾಡಲಾಗಿದೆ.

ಸ.ನಂ. 22ರಲ್ಲಿ 0-28

ಸ.ನಂ. 24ರಲ್ಲಿ 0-06

ಆ) ಈ ಕೊಳಚೆ ಪ್ರದೇಶವು ಸ.ನಂ.22 ಮತ್ತು 24ರಲ್ಲಿ ಮಾತ್ರವಿದ್ದು, ನ.ನಂ.21ರ ಜಮೀನಿನಲ್ಲಿ ಇರುವುದಿಲ್ಲ. ಸ.ನಂ.22ರ ಪ್ರದೇಶದಲ್ಲಿದ್ದ 3 ಜನ ಕೊಳಚೆ ನಿವಾಸಿಗಳು ಗುಡಿಸಲುಗಳಿದ್ದ ಜಾಗವನ್ನು ಬೇರೆಯವರಿಗೆ ಮಾರಾಟ ಮಾಡಿ ಖಾಲಿ ಮಾಡಿರುವುದು ಇತ್ತೀಚೆಗಷ್ಟೆ ಮಂಡಳಿಯ ಗಮನಕ್ಕೆ ಬಂದಿರುತ್ತದೆ.

ಇ) ಸ.ನಂ.22 ರ ಪ್ರದೇಶದ ಗುಡಿಸಲು ಸಂಖ್ಯೆ 1,2 ಮತ್ತು 3ರಲ್ಲಿ ವಾಸಿಸುತ್ತಿದ್ದ ನಿವಾಸಿಗಳು ತಮ್ಮ ಗುಡಿಸಲುಗಳನ್ನು ಕ್ರಯಕ್ಕೆ ಇತರರಿಗೆ ಮಾರಿ ಗುಡಿಸಲುಗಳನ್ನು ಖಾಲಿ ಮಾಡಿರುತ್ತಾರೆ. ಖರೀದಿಸಿರುವವರು ಈ ಮನೆಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವುದಾಗಿ ಇತ್ತೀಚೆಗಷ್ಟೆ ಮಂಡಳಿಯ ಗಮನಕ್ಕೆ ಬಂದಿರುತ್ತದೆ.

ಈ) ಖರೀದಿಸಿದ ಮನೆಗಳ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಕಾನೂನು ಪ್ರಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ವಿಷಯ: ರಾಜ್ಯದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ವಸತಿಗಳ ನಿರ್ಮಾಣ.

1150 (1719)

ಶ್ರೀ ಬಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಯಡಿಯಲ್ಲಿ ಎಷ್ಟೆಷ್ಟು ಹಣ ಮೀಸಲಾಗಿಡಲಾಗಿದ್ದಿತು? (ಯೋಜನವಾರು)

ಆ) 1997-98ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಯಡಿಯಲ್ಲಿ ನಿರ್ಮಿಸಲು ಉದ್ದೇಶಿಸಿದ ಮನೆಗಳೆಷ್ಟು?

ಇ) ನಿರ್ಮಿಸಿದ ಮನೆಗಳೆಷ್ಟು?

ಈ) ವಿತರಿಸಿದ ಮನೆಗಳೆಷ್ಟು? (ಜಿಲ್ಲಾವಾರು)

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ)

	ವಸತಿ ಯೋಜನೆ	(ಲಕ್ಷ ರೂಗಳಲ್ಲಿ) ಆರ್ಥಿಕ ಗುರಿ	ಖರ್ಚು
1.	ಆಶ್ರಯ ವಸತಿ ಯೋಜನೆ (ಗ್ರಾ) ಸಹಾಯಧನ	4499.68	3374.76
2.	ಆಶ್ರಯ ನಿವೇಶನ (ಗ್ರಾ)	1482.00	1112.00
3.	ಆಶ್ರಯ ನಿವೇಶನ (ನಗರ)	480.00	360.00
4.	ನೆರಳಿನ ಭಾಗ್ಯ	500.00	375.00
5.	ಡಾ:ಅಂಬೇಡ್ಕರ್ ವಸತಿ ಯೋಜನೆ	6750.00	2900.00
6.	ಇಂದಿರಾ ಆವಾಜ್ ಯೋಜನೆ	11601.09	7276.45

ಆ) ಆಶ್ರಯ ಮನೆಗಳು (ಗ್ರಾ ಮತ್ತು ನಗರ) 118822★

ಆಶ್ರಯ ನಿವೇಶನಗಳು (ಗ್ರಾ ಮತ್ತು ನಗರ) 150000

ಡಾ:ಅಂಬೇಡ್ಕರ್ ಮನೆಗಳು (ಗ್ರಾ ಮತ್ತು ನಗರ) 71942★

ಇಂದಿರಾ ಆವಾಜ್ ಮನೆಗಳು 37652

★ ಇದರಲ್ಲಿ ನೂತನ ಹಾಗೂ ಹಿಂದಿನ ಸಾಲುಗಳ ಬಾಕಿ ಮನೆಗಳು ಸೇರಿವೆ.

ಇ ಮತ್ತು ಈ) ನಿರ್ಮಿಸಿದ ಮನೆಗಳು ವಿತರಿಸಿದ ಮನೆಗಳು ಒಂದೇ ಆಗಿದ್ದು ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಅನುಬಂಧ

(Phy: in Nos.)

SL NO	DISTRICT	ASHRAYA	AMBEDKAR	I.A.Y
1	2	3	4	5
1.	BANGALORE RURAL	2260	647	2456
2.	BANGALORE URBAN	576	264	1555
3.	BELGAUM	2785	935	2878
4.	BELLARY	2226	562	2007
5.	BIDAR	924	766	2160
6.	BIJAPUR	2237	655	3750
7.	CHIKMAGALUR	1501	1096	1029
8.	CHITRADURGA	748	298	3066
9.	DAKSHINA KANNADA	7766	405	662
10.	DHARWAD	3207	782	2253
11.	GULBARGA	2625	32	5235
12.	HASSAN	1585	469	1048
13.	KODAGU	144	1533	333
14.	KOLAR	1872	1270	2760
15.	MANDYA	1357	1302	1498
16.	MYSORE	2142	679	2831
17.	RAICHUR	1243	1649	3598
18.	SHIMOGA	635	446	1677
19.	TUMKUR	1195	995	2311
20.	UTTARA KANNADA	1002	1196	415
	TOTAL	37980	16001	43522